# ಕರಾವಳಿ ಸುದ್ದಿ

ಅರಿವಿನತ್ತ ನಮ್ಮ ಚಿತ್ತ

KARAVALI SUDDI
ENGLISH-KANNADA WEEKLY

ವಾರ ಪತ್ರಿಕೆ

Vol: 11 Issue: 47 KARBIL/2015/62120 DAKSHINA KANNADA 13 to 19 APRIL 2026 Rs 10/-

ಅಪರಾಧಿಗಳು ಬೇರು ಸಹಿತವಾಗಿ ಭೂಮಿಯಿಂದ ಕೀಳಲ್ಪಡುವರು


## ಖಾಕಿ ಪಡೆಗೆ ಮರಣಶಾಸನ: ತಂದೆ-ಮಗನ ಲಾಕಪ್ ಡೆತ್ ಪ್ರಕರಣದ 9 ಪೊಲೀಸರಿಗೆ ಗಲ್ಲು ಶಿಕ್ಷೆ!

ದೇಶವನ್ನೇ ಬೆಚ್ಚಿಬೀಳಿಸಿದ್ದ ತಮಿಳುನಾಡಿನ ಸಾತನ್‌ಕುಳಂನ ತಂದೆ-ಮಗನ ಕಸ್ಟಡಿ ಸಾವು ಪ್ರಕರಣದಲ್ಲಿ ಮಧುರೈ ಜಿಲ್ಲಾ ನ್ಯಾಯಾಲಯ ಎಪ್ರಿಲ್ 6ರಂದು ಸೋಮವಾರ ಐತಿಹಾಸಿಕ ತೀರ್ಪು ನೀಡಿದೆ. ಅಮಾನವೀಯವಾಗಿ ವರ್ತಿಸಿ ಇಬ್ಬರ ಸಾವಿಗೆ ಕಾರಣರಾದ 9 ಪೊಲೀಸರಿಗೆ ಗಲ್ಲು ಶಿಕ್ಷೆ ವಿಧಿಸಿ ನ್ಯಾಯಾಧೀಶರಾದ ಜಿ. ಮುತ್ತುಕುಮಾರನ್ ಅವರು ಆದೇಶ ಹೊರಡಿಸಿದ್ದಾರೆ.

**ಪ್ರಕರಣದ ಹಿನ್ನೆಲೆ:**

2020ರ ಜೂನ್‌ನಲ್ಲಿ ಕೋವಿಡ್ ಲಾಕ್‌ಡೌನ್ ನಿಯಮ ಉಲ್ಲಂಘಿಸಿ ಮೊಬೈಲ್ ಅಂಗಡಿ ತೆರೆದಿದ್ದಾರೆ ಎಂಬ ಸಣ್ಣ ಕಾರಣಕ್ಕೆ ಪೊಲೀಸರು ಮರದ ವ್ಯಾಪಾರಿ 58 ವರ್ಷ ಪ್ರಾಯದ ಜಯರಾಜ್ ಮತ್ತು ಅವರ ಮಗ 31 ವರ್ಷ ಪ್ರಾಯದ ಬೆನಿಕ್ಸ್ ಅವರನ್ನು ಬಂಧಿಸಿದ್ದರು. ಠಾಣೆಯಲ್ಲಿ ಇಡೀ ರಾತ್ರಿ ಇಬ್ಬರನ್ನೂ ಅತ್ಯಂತ ಕ್ರೂರವಾಗಿ ಥಳಿಸಲಾಗಿತ್ತು. ತೀವ್ರ ರಕ್ತಸ್ರಾವ ಹಾಗೂ ಆಂತರಿಕ ಗಾಯಗಳಿಂದಾಗಿ ಜೂನ್ 22 ಮತ್ತು 23ರಂದು ಆಸ್ಪತ್ರೆಯಲ್ಲಿ ಇಬ್ಬರೂ ಮೃತಪಟ್ಟಿದ್ದರು.

**ನ್ಯಾಯಾಲಯದ ಪ್ರಮುಖ ಅಂಶಗಳು:**

* **ಅಪರೂಪದಲ್ಲಿ ಅಪರೂಪದ ಪ್ರಕರಣ:** ರಕ್ಷಿಸಬೇಕಾದವರೇ ಭಕ್ಷಕರಾದ ಈ ಘಟನೆಯನ್ನು ನ್ಯಾಯಾಲಯವು 'ಅಪರೂಪದಲ್ಲಿ ಅಪರೂಪದ ಪ್ರಕರಣ' ಎಂದು ಪರಿಗಣಿಸಿದೆ.
* **ಸಮಾನ ಅಪರಾಧಿಗಳು:** "ಯಾರು ಹೆಚ್ಚು ಹೊಡೆದರು ಎಂಬುದು ಮುಖ್ಯವಲ್ಲ, ಈ ಕೃತ್ಯದಲ್ಲಿ ಎಲ್ಲರೂ ಸಮಾನವಾಗಿ ಭಾಗಿಗಳಾಗಿದ್ದಾರೆ" ಎಂದು ಕೋರ್ಟ್ ಹೇಳಿದೆ.
* **ಕಠಿಣ ಸಂದೇಶ:** ಭವಿಷ್ಯದಲ್ಲಿ ಯಾವುದೇ ಪೊಲೀಸ್ ಅಧಿಕಾರಿ ಇಂತಹ ದುಸ್ಸಾಹಸಕ್ಕೆ ಕೈಹಾಕಬಾರದು ಎಂಬ ಎಚ್ಚರಿಕೆಯನ್ನು ಈ ತೀರ್ಪು ನೀಡಿದೆ.
* **ದಂಡದ ಮೊತ್ತ:** ಮರಣದಂಡನೆಯ ಜೊತೆಗೆ, ಅಪರಾಧಿಗಳಿಗೆ ಒಟ್ಟು 1.40 ಕೋಟಿ ರೂಪಾಯಿ ಭಾರಿ ದಂಡವನ್ನೂ ವಿಧಿಸಲಾಗಿದ್ದು, ಈ ಹಣವನ್ನು ಸಂತ್ರಸ್ತ ಕುಟುಂಬಕ್ಕೆ ಪರಿಹಾರವಾಗಿ ನೀಡುವಂತೆ ಸೂಚಿಸಲಾಗಿದೆ.



**ಶಿಕ್ಷೆಗೊಳಗಾದವರು:**

1. ಶ್ರೀಧರ್ (ಇನ್ಸ್‌ಪೆಕ್ಟರ್ – ಇವರಿಗೆ ಎರಡು ಬಾರಿ ಗಲ್ಲು ಶಿಕ್ಷೆ ಹಾಗೂ 84 ಲಕ್ಷ ರೂಪಾಯಿ ದಂಡ)
2. ಬಾಲಕೃಷ್ಣನ್ (ಸಬ್ ಇನ್ಸ್‌ಪೆಕ್ಟರ್)
3. ರಘು ಗಣೇಶ್ (ಸಬ್ ಇನ್ಸ್‌ಪೆಕ್ಟರ್)
4. ಮುರುಗನ್ (ಹೆಡ್ ಕಾನ್ಸ್‌ಟೆಬಲ್)
5. ಸಾಮಿ ದೊರೈ (ಹೆಡ್ ಕಾನ್ಸ್‌ಟೆಬಲ್)
6. ಮುತ್ತುರಾಜ್ (ಕಾನ್ಸ್‌ಟೆಬಲ್)
7. ಚೆಲ್ಲದೊರೈ (ಕಾನ್ಸ್‌ಟೆಬಲ್)




8. ಥಾಮಸ್ ಫ್ರಾನ್ಸಿಸ್ (ಕಾನ್ಸ್‌ಟೆಬಲ್)
9. ವೈಲುಮುತ್ತು (ಕಾನ್ಸ್‌ಟೆಬಲ್)

ಪ್ರಕರಣದ ಮತ್ತೊಬ್ಬ ಆರೋಪಿ ಪೌಲ್‌ದೊರೈ ವಿಚಾರಣೆ ನಡೆಯುತ್ತಿರುವಾಗಲೇ ಕೋವಿಡ್‌ನಿಂದ ಮೃತಪಟ್ಟಿದ್ದರು.

**"ನ್ಯಾಯದ ಜಯ":** ಆರು ವರ್ಷಗಳ ಸುದೀರ್ಘ ಹೋರಾಟದ ನಂತರ ಜಯರಾಜ್ ಅವರ ಕುಟುಂಬಕ್ಕೆ ನ್ಯಾಯ ಸಿಕ್ಕಂತಾಗಿದೆ. ಈ ತೀರ್ಪು ಪೊಲೀಸ್ ಇಲಾಖೆಯಲ್ಲಿನ ದೌರ್ಜನ್ಯಗಳ ವಿರುದ್ಧ ಸಾಂಸ್ಥಿಕ ಬದಲಾವಣೆಗೆ ನಾಂದಿಯಾಗಲಿ ಎಂದು ಮಾನವ ಹಕ್ಕುಗಳ ಹೋರಾಟಗಾರರು ಆಶಿಸಿದ್ದಾರೆ.

## ರಸ್ತೆ ಬದಿ ತ್ಯಾಜ್ಯ ಎಸೆಯುವವರಿಗೆ ದಂಡ - ಪಾವತಿಸದಿದ್ದರೆ FIR ದಾಖಲು

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡುವ ಮಹತ್ವದ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ನರ್ವಾಡೆ ವಿನಾಯಕ ಕಾರ್ಭಾರಿ ಅಧ್ಯಕ್ಷತೆಯಲ್ಲಿ ನಡೆದ ವೀಡಿಯೋ ಸಭೆಯಲ್ಲಿ, ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ರಸ್ತೆ ಬದಿ ತ್ಯಾಜ್ಯ ಎಸೆಯುವ ಮತ್ತು ಸುರಿದವರ ವಿರುದ್ಧ ತಕ್ಷಣ ದಂಡ ವಿಧಿಸಿ, ಪಾವತಿಸದಿದ್ದರೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸುವಂತೆ ಸ್ಪಷ್ಟ ಸೂಚನೆ ನೀಡಲಾಯಿತು.

ಸಭೆಯಲ್ಲಿ ಪ್ರತಿ ತಿಂಗಳು 1ನೇ ಮತ್ತು 3ನೇ ಶನಿವಾರ ನಡೆಯುವ 'ಸ್ವಚ್ಛ ಶನಿವಾರ' ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯ ಎಲ್ಲ ರಸ್ತೆಗಳ ಸ್ವಚ್ಛತೆ ಕಾಪಾಡುವಂತೆ ಸೂಚನೆ ನೀಡಲಾಗಿದೆ. ಸ್ವಚ್ಛ ಸಂಕೀರ್ಣವಿಲ್ಲದ 63 ಗ್ರಾಮ ಪಂಚಾಯತ್‌ಗಳಲ್ಲಿ ಕನಿಷ್ಠ 1000 ಚದರ ಅಡಿ ವಿಸ್ತೀರ್ಣದ ಘಟಕ ನಿರ್ಮಾಣಕ್ಕೆ ಯೋಜನೆ ತಯಾರಿಸಲು, ಸ್ಥಳೀಯ ಅನಿರ್ಬಂಧಿತ ನಿಧಿ ಮತ್ತು ಲಭ್ಯವಿರುವ ಅನುದಾನವನ್ನು ಬಳಸಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.




ತ್ಯಾಜ್ಯ ನಿರ್ವಹಣೆಗೆ 92 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದ್ದು, ಇದರಲ್ಲಿ 48 ಗ್ರಾಮ ಪಂಚಾಯತ್‌ಗಳು ತಕ್ಷಣ ತ್ಯಾಜ್ಯ ನಿರ್ವಹಣಾ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು. ಏಕ ಬಳಕೆ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಿ, ಮಾರಾಟ, ವಿತರಣೆ, ಸಂಗ್ರಹಣೆ ಹಾಗೂ ತಯಾರಿಕೆಗೆ ಮೇಲ್ವಿಚಾರಣೆ ನಡೆಸಿ, ಪರ್ಯಾಯ ವಸ್ತುಗಳ ಬಳಕೆಗೆ ಜನರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಜಯಲಕ್ಷ್ಮೀ ರಾಯ್, ಯೋಜನಾ ಅಧಿಕಾರಿ ಇ. ಜಯರಾಮ್, ಪರಿಸರ ಅಧಿಕಾರಿ ಮಹೇಶ್ವರಿ ಸಿಂಗ್ ಮತ್ತು ಸ್ವಚ್ಛ ಭಾರತ್ ಮಿಷನ್ ಅಧಿಕಾರಿಗಳು ಭಾಗವಹಿಸಿದ್ದರು. ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತ್ ಸದಸ್ಯರು ಗುರಿ ನಿಗದಿಪಡಿಸಿ ದಂಡ ಸಂಗ್ರಹಣೆ ಮಾಡುವಂತೆ ಸೂಚನೆ ಪಡೆದಿದ್ದಾರೆ. ಈ ಕ್ರಮಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ಪರಿಸರ ಸುಸ್ಥಿರತೆ, ಸಾರ್ವಜನಿಕ ಜಾಗೃತಿ ಮತ್ತು ಶಿಸ್ತು ಹೆಚ್ಚಲು ನಿರೀಕ್ಷೆ ವ್ಯಕ್ತವಾಗಿದೆ.

## SCDCC ಬ್ಯಾಂಕ್ ಐತಿಹಾಸಿಕ ಸಾಧನೆ - 20,226 ಕೋಟಿ ರೂಪಾಯಿ ವ್ಯವಹಾರ, 131 ಕೋಟಿ ರೂಪಾಯಿ ಲಾಭ!

### ಸತತ 31 ವರ್ಷಗಳಿಂದ 100% ಕೃಷಿ ಸಾಲ ಮರುಪಾವತಿ ದಾಖಲೆ - ಮುಂದಿನ ವರ್ಷಕ್ಕೆ 22,500 ಕೋಟಿ ರೂಪಾಯಿ ವ್ಯವಹಾರದ ಗುರಿ

ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ 112 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (SCDCC), 2025-26ನೇ ಹಣಕಾಸು ವರ್ಷದಲ್ಲಿ 20,226.19 ಕೋಟಿ ರೂಪಾಯಿಗಳ ದಾಖಲೆಯ ಒಟ್ಟು ವ್ಯವಹಾರ ನಡೆಸಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ ಎಂದು ಬ್ಯಾಂಕ್‌ನ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರು ತಿಳಿಸಿದ್ದಾರೆ. ಮಂಗಳೂರಿನ ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ಯಾಂಕ್‌ನ ವಾರ್ಷಿಕ ಪ್ರಗತಿಯ ವಿವರಗಳನ್ನು ಹಂಚಿಕೊಂಡರು. ಪ್ರಮುಖ ಮುಖ್ಯಾಂಶಗಳು: ಕಳೆದ ವರ್ಷಕ್ಕೆ ಹೋಲಿಸಿದರೆ ಬ್ಯಾಂಕ್ ಶೇ. 18.78 ರಷ್ಟು ಪ್ರಗತಿ ಸಾಧಿಸಿದ್ದು, 131.14 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ. ಇದು ರಾಜ್ಯದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಪೈಕಿ ಸಾರ್ವಕಾಲಿಕ ದಾಖಲೆಯಾಗಿದೆ.

**ಕೃಷಿ ಸಾಲ ಮರುಪಾವತಿ ದಾಖಲೆ:** ಕಳೆದ 31 ವರ್ಷಗಳಿಂದ ಕೃಷಿ ಸಾಲ ಮರುಪಾವತಿಯಲ್ಲಿ ಬ್ಯಾಂಕ್ ಸತತವಾಗಿ ಶೇ. 100 ರಷ್ಟು ಸಾಧನೆ ಮಾಡುತ್ತಾ ಬಂದಿದ್ದು, ಇದು ರಾಷ್ಟ್ರೀಯ ದಾಖಲೆಯಾಗಿದೆ.





**ಠೇವಣಿ ಸಂಗ್ರಹ:** ಯಾವುದೇ ಸರ್ಕಾರಿ ಠೇವಣಿ ಇಲ್ಲದೆಯೇ ತನ್ನ 113 ಶಾಖೆಗಳ ಮೂಲಕ ಒಟ್ಟು 9,264.64 ಕೋಟಿ ರೂಪಾಯಿ ಠೇವಣಿ ಸಂಗ್ರಹಿಸುವ ಮೂಲಕ ರಾಜ್ಯದಲ್ಲೇ ಮುಂಚೂಣಿಯಲ್ಲಿದೆ ಎಂದು ಅವರು ಹೇಳಿದರು.

ಗ್ರಾಹಕರಿಗೆ ಯುಪಿಐ (UPI), ಐಎಂಪಿಎಸ್ (IMPS), ಮೊಬೈಲ್ ಬ್ಯಾಂಕಿಂಗ್ ಹಾಗೂ ಟ್ಯಾಬ್ ಬ್ಯಾಂಕಿಂಗ್ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಈಗಾಗಲೇ 1.44 ಲಕ್ಷಕ್ಕೂ ಅಧಿಕ ರೈತರಿಗೆ ರೂಪೇ (RuPay) ಕಿಸಾನ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. ರಾಜ್ಯದಲ್ಲೇ ಮೊದಲ ಬಾರಿಗೆ 34,765 ಸ್ವಸಹಾಯ ಗುಂಪುಗಳನ್ನು ಹೊಂದುವ ಮೂಲಕ ಬ್ಯಾಂಕ್ ಪ್ರಥಮ ಸ್ಥಾನದಲ್ಲಿದೆ. ನವೋದಯ ಸ್ವಸಹಾಯ ಸಂಘದ ಮಹಿಳಾ ಸದಸ್ಯರಿಗೆ ಸಮವಸ್ತ್ರ ವಿತರಣೆಯಂತಹ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಬ್ಯಾಂಕ್‌ನ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಅವರು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

**ಮುಂದಿನ ಯೋಜನೆಗಳು:** ಬ್ಯಾಂಕ್ ಮುಂಬರುವ ದಿನಗಳಲ್ಲಿ ಇನ್ನಷ್ಟು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಿದ್ದು, 10 ಹೊಸ ಶಾಖೆಗಳನ್ನು ತೆರೆಯುವ ಯೋಜನೆಯನ್ನು ಹೊಂದಿದೆ. 2026-27ನೇ ಸಾಲಿಗೆ 22,500 ಕೋಟಿ ರೂ. ವ್ಯವಹಾರದ ಗುರಿಯನ್ನು ಹಾಕಿಕೊಳ್ಳಲಾಗಿದೆ ಎಂದು ಡಾ. ರಾಜೇಂದ್ರ ಕುಮಾರ್ ವಿವರಿಸಿದರು. ಬ್ಯಾಂಕ್‌ನ ಈ ಸಾಧನೆಗಾಗಿ ಈಗಾಗಲೇ 23 ಬಾರಿ 'ಅಪೆಕ್ಸ್ ಬ್ಯಾಂಕ್ ಪ್ರಶಸ್ತಿ' ಹಾಗೂ 19 ಬಾರಿ 'ನಬಾರ್ಡ್ ಪ್ರಶಸ್ತಿ' ಲಭಿಸಿರುವುದು ಗಮನಾರ್ಹ. ಬ್ಯಾಂಕ್‌ನ 20 ಶಾಖೆಗಳು ಸಂಪೂರ್ಣ ಹವಾನಿಯಂತ್ರಿತವಾಗಿದ್ದು, ಗ್ರಾಹಕ ಸ್ನೇಹಿ ಸೇವೆಯನ್ನು ನೀಡುತ್ತಿವೆ ಎಂದು ಹೇಳಿದರು.

## ಚರ್ಚ್ ಆವರಣದಲ್ಲಿ ಅಡಿಕೆ ಕೃಷಿ - ಲಕ್ಷಾಂತರ ರೂಪಾಯಿ ಆದಾಯದತ್ತ ಸೂರಿಕುಮೇರು ಚರ್ಚ್!



**ವಂದನೀಯ ಫಾದರ್ ಗ್ರೆಗರಿ ಪಿರೇರಾ ಅವರಿಗೆ ಕೃತಜ್ಞತೆ ಸಲ್ಲಿಸಿದ ಹಿಂದಿನ ಚರ್ಚ್ ಆಡಳಿತ ಮಂಡಳಿ**

ಕೇವಲ ಸಾಂಪ್ರದಾಯಿಕ ಕೃಷಿಗೆ ಸೀಮಿತವಾಗದೆ, ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಬದಲಾವಣೆ ತಂದರೆ ಹೇಗೆ ಯಶಸ್ಸು ಪಡೆಯಬಹುದು ಎಂಬುದಕ್ಕೆ ಸೂರಿಕುಮೇರು ಚರ್ಚ್ ಒಂದು ಉತ್ತಮ ನಿದರ್ಶನವಾಗಿದೆ.

ಮಂಗಳೂರು ಧರ್ಮಕ್ಷೇತ್ರದ ಸೂರಿಕುಮೇರು ಚರ್ಚ್ ಆವರಣದಲ್ಲಿ ಕೆಲವು ವರ್ಷಗಳ ಹಿಂದೆ ಕೇವಲ ರಬ್ಬರ್ ಗಿಡಗಳನ್ನು ಬೆಳೆಸಲಾಗಿತ್ತು. ಆದರೆ ಇದರಿಂದ ನಿರೀಕ್ಷಿತ ಲಾಭ ಬರುತ್ತಿಲ್ಲ ಎಂಬುದನ್ನು ಮನಗಂಡ ಅಂದಿನ ಚರ್ಚ್ ಧರ್ಮಗುರುಗಳಾದ ವಂದನೀಯ ಫಾದರ್ ಗ್ರೆಗರಿ ಪಿರೇರಾ ಅವರು, ರಬ್ಬರ್ ಗಿಡಗಳನ್ನು ಸಂಪೂರ್ಣವಾಗಿ ತೆರವುಗೊಳಿಸಿ ಆ ಜಾಗದಲ್ಲಿ ಅಡಿಕೆ ಮತ್ತು ಇತರ ಕೃಷಿ ಗಿಡಗಳನ್ನು ನೆಡುವ ಮಹತ್ತರ ನಿರ್ಧಾರ ಕೈಗೊಂಡಿದ್ದರು.

ಅವರ ಈ ದೂರದೃಷ್ಟಿಯ ಫಲವಾಗಿ ಮತ್ತು ಅಂದಿನ ಚರ್ಚ್ ಆಡಳಿತ ಮಂಡಳಿಯವರ ನಿರಂತರ ಕಾಳಜಿಯಿಂದಾಗಿ, ಇಂದು ಈ ಕೃಷಿ ಭೂಮಿಯಿಂದ ಸುಮಾರು 18 ಲಕ್ಷ ರೂಪಾಯಿಗಳಿಗೂ ಅಧಿಕ ಆದಾಯ ಬರುತ್ತಾ ಇದೆ. ಈ ಹಣವನ್ನು ಚರ್ಚ್‌ನ ಅಭಿವೃದ್ಧಿ ಕೆಲಸಗಳಿಗಾಗಿ ಬಳಸಲು ನಿರ್ಧರಿಸಲಾಗಿದೆ ಎಂದು ಪ್ರಸ್ತುತ ಚರ್ಚ್ ಧರ್ಮಗುರು ಈಸ್ಟರ್ ಹಬ್ಬದ ದಿನದಂದು ಭಕ್ತಾದಿಗಳಿಗೆ ತಿಳಿಸಿದ್ದಾರೆ.

**ಪ್ರಮುಖ ಅಂಶಗಳು:**

* **ಕ್ರಾಂತಿಕಾರಿ ಬದಲಾವಣೆ:** ರಬ್ಬರ್ ಕೃಷಿಯಿಂದ ಲಾಭದಾಯಕ ಅಡಿಕೆ ಕೃಷಿಗೆ ಚರ್ಚ್ ಭೂಮಿಯನ್ನು ಪರಿವರ್ತಿಸಲಾಗಿದೆ.
* **ಗಣನೀಯ ಆದಾಯ:** ಪ್ರಸ್ತುತ ಬೆಳೆಯಿಂದ ಸುಮಾರು 18 ಲಕ್ಷ ರೂಪಾಯಿಗಳ ಆದಾಯ ಲಭ್ಯವಾಗಿದೆ.
* **ಅಭಿನಂದನೆ ಸಲ್ಲಿಕೆ:** ಈ ಯಶಸ್ಸಿಗೆ ಕಾರಣರಾದ ವಂದನೀಯ ಫಾದರ್ ಗ್ರೆಗರಿ ಪಿರೇರಾ, ವಂದನೀಯ ಫಾದರ್ ಮೆಲ್ವಿನ್ ನೊರೋನ್ಹಾ ಮತ್ತು ಅಂದಿನ ಚರ್ಚ್ ಪಾಲನಾ ಸಮಿತಿಯ ಪದಾಧಿಕಾರಿಗಳಾದ ಸ್ಟೀವನ್ ಪ್ರಕಾಶ್ ಮಾರ್ಟಿಸ್, ಎಲಿಯಾಸ್ ಪಿರೇರಾ, ರೋಷನ್ ಬೊನಿಫಾಸ್ ಮಾರ್ಟಿಸ್ (ಉಪಾಧ್ಯಕ್ಷರುಗಳು) ಹಾಗೂ ಸ್ಟೀವನ್ ಆಲ್ವಿನ್ ಪಾಯ್ಸ್, ಮೇರಿ ಡಿಸೋಜ, ಪ್ರೀತಿ ಲ್ಯಾನ್ಸಿ ಪಿರೇರಾ (ಕಾರ್ಯದರ್ಶಿಗಳು) ಮತ್ತು ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೆ ಭಕ್ತಾದಿಗಳು ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

ರಬ್ಬರ್ ಗಿಡಗಳನ್ನು ತೆರವುಗೊಳಿಸುವಾಗ ಕೆಲವರು ಮತ್ಸರದಿಂದ ವಿರೋಧಿಸಿದ್ದರು. ಮಂಗಳೂರು ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಿಗೆ ಪತ್ರಗಳನ್ನು ಬರೆದು ಆಕ್ಷೇಪಣೆ ಸಲ್ಲಿಸಿದ್ದರು. ಆದರೂ ಅಂದಿನ ಚರ್ಚ್ ಆಡಳಿತ ಮಂಡಳಿ ಅಂದು ಕೈಗೊಂಡ ಧೈರ್ಯದ ನಿರ್ಧಾರ ಇಂದು ಚರ್ಚ್ ಆರ್ಥಿಕವಾಗಿ ಸ್ವಾವಲಂಬಿಯಾಗಲು ಮತ್ತು ಅಭಿವೃದ್ಧಿ ಪಥದಲ್ಲಿ ಸಾಗಲು ಸಹಕಾರಿಯಾಗಿದೆ ಎಂದು ಭಕ್ತಾದಿಗಳು ಶ್ಲಾಘಿಸಿದ್ದಾರೆ. ಇಷ್ಟು ದೊಡ್ಡ ಮೊತ್ತದ ಆದಾಯದಿಂದ ವಿರೋಧಿಸಿದವರಿಗೆ ನಾಚಿಕೆ ಪಡುವಂತೆ ಆಗಿದೆ.









## `Sumadhur-2' Melodies of Compassion Enchant Thousands at Santhekatte



Santhekatte witnessed a musical extravaganza of faith, art, and charity as 'Sumadhur-2', a grand concert led by acclaimed singer-composer Joshal Dsouza, drew thousands to the grounds of Mount Rosary Church on Sunday. Organised by the Catholic Sabha Udupi Pradesh (R.), the event was a perfect Easter celebration, blending top-tier entertainment with a noble philanthropic mission. The evening commenced with a soulful prayer song by the students of Sumadhur Music Academy, setting a serene tone for the night. The program was masterfully compèred by Nelson Monis, whose charisma and stage presence captivated the audience from the outset. Joshal Dsouza soon took center stage, thrilling fans with her hit "Tu Yetai Munon" from the album Hero. The concert further shone with Konkani music icons Robin Sequeira and Jason Lobo, along with young talent Ishney Fernandes from Kemmannu, delivering a dynamic mix of multilingual medleys, soulful duets, and powerful solos. A standout performance came from little Leona Olivera, who charmed everyone with her daring rendition of the Goan classic "Red Rose". The talented students of Sumadhur Music Academy provided flawless backing vocals, forming the musical backbone of the event. The night also featured diverse performing arts—Team Memory Mangaluru entertained with lively comedy skits, while the Urban Groove dancers set the stage ablaze with high-energy choreography. Sanjay Rodrigues and his band elevated the production with world-class orchestration, all seamlessly coordinated under the visionary direction of Stany Bela. At its core, Sumadhur-2 was a celebration of compassion. The organisers honoured Ronald D Almeida, president of Catholic Sabha Udupi Pradesh, for his visionary leadership in spearheading a fundraising campaign that successfully collected Rs 1 crore for the developmental works of Goretti Hospital. Joshal Dsouza and her team were felicitated for their pivotal role in this noble initiative. The Central Council of Catholic Sabha expressed heartfelt gratitude to the clergy of Udupi Diocese and all contributors, acknowledging that Sumadhur-2 was not only a musical milestone but also a remarkable philanthropic success, leaving the audience inspired and uplifted.

## `Easter Rays' - Infant Mary Parish Celebrates Joyful Resurrection with Culture and Community



On the joyous occasion of Easter Sunday, the Stree Ayog and Stree Sanghatan of Infant Mary Parish, Bajjodi, orchestrated a vibrant cultural extravaganza titled "Easter Rays" to commemorate the resurrection of Lord Jesus, bringing together the parish community in faith, celebration, and togetherness. The festivities began with a Fancy Fete, ceremoniously inaugurated by Rev. Fr Pranam and Rev. Fr Cyril. The formal stage program was presided over by Rev. Fr Dominic Vas, Parish Priest, and graced by dignitaries including Vincent Pinto (Vice President, Parish Council), Janet Dsouza (Secretary, Parish Council), Asuntha Mendonca (21 Ayog Coordinator), Jacintha Monis (President, Stree Ayog & Stree Sanghatan) and Meena Pinto (Secretary, Stree Sanghatan). The program opened with a soulful prayer song performed by the youth and women, followed by an energetic welcome dance by the parish altar servers. Molly Rodrigues, Vice President of Stree Sanghatan, warmly welcomed the dignitaries and the congregation. The highlight of the evening was a hilarious Tulu comedy performance by the renowned "Telikeda Tenali" team from Karkala, led by Sunil Nelligude, who, along with his team, were felicitated for their outstanding entertainment. Fun-filled activities included lucky draws, beer draw games, and housie, keeping the spirits high throughout. Anitha Veigas, the highest coupon seller, and Molly Rodrigues, honoured for securing the highest sponsorship collection, were specially felicitated. The church grounds buzzed with excitement as various food and game stalls were organized by the YCS (Young Christian Students) and the women of the parish, offering delicious treats and joyful entertainment for all parishioners. The evening concluded with a heartfelt vote of thanks by Jacintha Monis, who expressed gratitude to the priests, performers, and the entire parish community for their overwhelming support. The celebration ended on a high note with lively Baila performances, leaving everyone with cherished memories of faith, fun, and festivity. The program was elegantly compèred by Meena Pinto and Janet Dsouza, ensuring a seamless and joyous experience for all attendees.

## Seventh Home Brings Hope - Maria Fernandes Housing Project Lights Up Lives






In a heartwarming gesture of compassion and community service, Maria Fernandes inaugurated the seventh house under her ambitious housing initiative for the underprivileged on Monday, April 6. The ceremony marked a significant milestone in her mission to provide shelter, dignity, and hope to needy families. Hailing from Taccode and married to Valerian Fernandes of Neerude, Maria Fernandes faced life's challenges early, becoming a widow at 33 with two young daughters. Driven by determination, she worked abroad in Cyprus, Bahrain, Muscat, and Israel for 17 years, ensuring quality education and a secure future for her daughters, Anita Lavina and Amritha Libret.Despite personal responsibilities, Maria Fernandes remained deeply committed to uplifting the poor. Inspired by compassion, she envisioned building 15 houses, each costing Rs 10 lakh, for underprivileged families. The newly inaugurated house was allotted to Prima Cutinha, a widow with four children—Vinod, Vijetha, Pavitra, and Prabod—bringing relief and renewed hope to the family.The housing project is part of a larger initiative by the Diocese of Mangalore, coordinated by Rev. Fr Vijay Machado, Director of the CCBI Commission for YOUCAT, Goa, and funded through Rev Fr Vincent D'Souza, Director of CODP, Nanthoor. Rev Fr Onil D'Souza, Parish Priest of Corpus Christi Church, Moodbidri, blessed the new home and played a key role in coordinating its completion.The house was constructed on a zero-profit basis by Denis Pereira and Praveen D'Souza of Fortune Promoters. Members of the St Vincent de Paul Society of Corpus Christi Church, including Vice-President Marcel Dsouza, Secretary Norbert Martis, and Media Coordinator Ivy Serrao, were present, reflecting strong community support for this noble cause. Expressing gratitude, beneficiary Vijetha Cutinha thanked everyone for their support, calling the new home a beacon of hope for her family.

## Vandse Gram Panchayat Wins `National Healthy Panchayat Award', Bags Rs 75 Lakh Prize




Kundapur, Vandse Gram Panchayat has been honoured with the prestigious Deen Dayal Upadhyay National Award for emerging as a model 'healthy panchayat', receiving a cash prize of Rs 75 lakh for its outstanding initiatives in sanitation, waste management, and public health. Over the years, Vandse GP has set a benchmark in solid waste management, ensuring 100 percent household waste collection for nine consecutive years. Through its SLRM unit, wet and dry waste are segregated, processed, and sold, generating revenue while maintaining a zero-waste approach. The panchayat also provides free mortuary box services, reflecting its holistic approach to community welfare.Health initiatives have been equally remarkable. The Vandse Primary Health Centre prioritises maternal and child care, with no maternal or infant deaths reported, full immunisation coverage, and effective anaemia prevention programmes. Initiatives such as the 100-day TB-free Gram Panchayat campaign, Poshan Abhiyan, distribution of Ayushman Bharat health cards, and regular health camps have strengthened public health outcomes. In addition, the panchayat runs a helpline and free ambulance service via Niramaya Society, maintains a digital health registry for senior citizens and patients, and has established a community palliative care centre in collaboration with Manipal KMC. Wellness programmes, including yoga training in schools and three modern community toilets, further reflect Vandse's commitment to holistic development. Former President Udaykumar Shetty Adekodlu expressed pride in the achievement, highlighting the combined efforts of villagers, panchayat members, PDOs, and officials that made Vandse a national model of health, sanitation, and sustainable governance.

## Mangalore Physiocon 2026 – Pre-Conference Hands-on Workshop at Father Muller College of Physiotherapy



The Pre-conference Hands-on Workshop of Mangalore Physiocon 2026 was successfully conducted by Father Muller College of Physiotherapy in association with the South Canara Teachers Association. The workshop was centered on the theme "Return to Sport Decision Making after Common Sports Injuries: A Criteria-Based Framework."The day commenced at 8:30 AM with an introductory session by the host, Ishrat, who warmly welcomed the participants and highlighted the significance of the workshop as a platform fostering knowledge, innovation, and excellence in physiotherapy. The theory session began thereafter, led by the esteemed resource person, Dr Prabhu Raja G., Assistant Professor and Head Coordinator, Centre for Fascia Research, Department of Sports and Exercise Sciences, Manipal College of Health Professionals, MAHE. The session focused on evidence-based approaches and clinical reasoning in return-to-sport decision-making following sports injuries. At 9:30 AM, the inaugural ceremony was held with great enthusiasm. The dignitaries were formally welcomed and escorted to the dais. The event was graced by distinguished guests including Rev. Fr Faustine Lucas Lobo (Director, FMCI), Shalet Pinto (Chairperson, Eco Tourism Development Board, Karnataka State and Chief Guest), Dr Prabhu Raja G. (Resource Person), Rev. Dr Micheal Santhumayor (Administrator, FMCOP), Rev. Fr George Jeevan Sequiera (Administrator, FMMCH), and Prof. Cherishma Dsilva (Principal, FMCOP) and Dr Cyanna Dsouza (Associate Professor, FMCOP).The ceremony began with a prayer song, invoking divine blessings, followed by a formal Welcome Address by Dr Cyanna Dsouza, the Organizing Secretary, who emphasized the importance of such academic gatherings in advancing physiotherapy practice. A significant highlight of the inauguration was the ceremonial lighting of the lamp, symbolizing the dispelling of ignorance and the pursuit of knowledge. The Chief Guest Address by Shalet Pinto was inspiring, as she emphasized the importance of sports, rehabilitation, and holistic well-being. She appreciated the efforts of the organizers in promoting awareness about sports injury management. As a token of appreciation, she was presented with a memento by the Director.The resource person, Dr Prabhu Raja G., was also honored for his valuable contribution to the workshop and presented with a memento by Rev Dr Michael Santhumayor. The Presidential Address by Rev. Fr Faustine Lucas Lobo highlighted the institution's commitment to academic excellence and the importance of integrating research and clinical practice. The ceremony concluded with a heartfelt Vote of Thanks, acknowledging the contributions of the dignitaries, organizing committee, faculty, and participants. The inaugural session ended with the Institutional Anthem, followed by a tea break. Post the break, the workshop continued with practical sessions conducted at the Indoor Stadium. These hands-on sessions provided participants with an opportunity to apply theoretical concepts in real-life clinical scenarios. Under the expert guidance of Dr Prabhu Raja G., participants were trained in assessment techniques, functional testing, and criteria-based progression for safe return to sports. The session emphasized evidence-based rehabilitation strategies, injury prevention, and performance optimization. The practical component was highly interactive, enabling students and professionals to refine their clinical skills and gain confidence in decision-making for sports rehabilitation. Overall, the pre-conference workshop was a grand success, offering a comprehensive learning experience by integrating theory with practical application. It served as an enriching platform for physiotherapy students and professionals to enhance their knowledge and clinical expertise in sports injury management.

## Grand Inauguration of Mangalore Physiocon 2026 Pre-Conference Workshop



Dr M.V. Shetty College of Physiotherapy, Vidyanagar, Mangalore, successfully hosted the Dr M.R. Shetty Memorial Pre-Conference Workshop as part of Mangalore Physiocon 2026, marked by a grand inaugural ceremony held at the college campus. The event commenced with a formal inauguration by Dr B. Unnikrishnan, Dean of Kasturba Medical College, Mangalore, who emphasized the growing importance of physiotherapy in modern healthcare and highlighted the need for continuous academic engagement among professionals and students. The ceremony was presided over by Prof. Dr Hima Urmila Shetty, Chairperson of Dr M.V. Shetty Memorial Trust (R.), who shared the institution's vision of promoting excellence in physiotherapy education and research. Dr Ranjit Shetty, Trustee of the Trust, graced the occasion as the Guest of Honour and encouraged participants to actively engage in knowledge-sharing platforms such as Physiocon. The workshop, titled "The Beginner's Shoulder: Stable Foundation for Better Outcome," featured Dr Basavaraj S. Nanjannavar (P.T.) as the Resource Person. An accomplished academician and clinician, he serves as Assistant Professor and In-charge Head of the Department of Physiotherapy at Belgaum Institute of Medical Sciences, and as Chief Physiotherapist at Deesha Healthcare. The event witnessed enthusiastic participation from students, academicians, and healthcare professionals, setting a vibrant and positive tone for the upcoming sessions of Mangalore Physiocon 2026.The programme was organized under the leadership of Dr U.T. Ifthikar Fareed, Organising Chairman; Prof. Dr L. Gladson Jose, Organising Joint Secretary; and Prof. Vaishali Sreejith, Convenor, whose dedicated efforts ensured the smooth and successful conduct of the event. The inaugural ceremony concluded with a heartfelt note of appreciation to all dignitaries and participants, reaffirming the institution's unwavering commitment to fostering academic excellence and professional growth in the field of physiotherapy.

